**<u>ದಿನಾಂಕಃ 27-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿ **6** ಮತ್ತು **7** ರವರ ಪರ ಶ್ರೀ ಕೆ.ಆರ್.ಎಸ್. ವಕೀಲರಿಂದಃ</u>

ನಮ್ಮ ಅಜ್ಜ ಕಾಂತಪೂಜಾರಿ ತೀರಿಕೊಂಡ ನಂತರ ಅವರ ಮಕ್ಕಳಾದ ಶೇಖರ್ ಪೂಜಾರಿ, ದಯಾನಂದ ಮತ್ತು ರಘುನಾಥ್ ಇವರ ಹೆಸರಿನಲ್ಲಿ ಜಂಟಿ ಖಾತೆ ಆದೇಶ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ಮ್ಯುಟೇಶನ್ ದೃಢಿಕೃತ ಪ್ರತಿ ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ಕಾಂತಪೂಜಾರಿ ಇವರಿಗೆ ಹೆಣ್ಣು ಮಕ್ಕಳು ಇದ್ದರು ಎಂಬುದರ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಸ.ನಂ.53 ರಲ್ಲಿ 1 ಎಕ್ರೆ 15 ಗುಂಟೆ ಶೇಖರ್ ಪೂಜಾರಿ, ದಯಾನಂದ ಮತ್ತು ರಘುನಾಥ್ ಹೆಸರಿನಲ್ಲಿ ಜಂಟಿ ಪಹಣಿ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಶೇಖರ್ ಪೂಜಾರಿ ಇವರು ಮದುವೆಯಾಗದೇ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

2. 2007 ರಲ್ಲಿ 1 ಎಕ್ರೆ 15 ಗುಂಟೆ ಸ.ನಂ.53 ರ ಆಸ್ತಿ ರಘುನಾಥ ಮತ್ತು ದಯಾನಂದ್ ಇವರ ಹೆಸರಿನಲ್ಲಿ ಜಂಟಿಯಾಗಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಸ.ನಂ.53 ಹಾಗೂ ಇತರೆ ಆಸ್ತಿಗಳ ಮೇಲೆ ಸಾಲ ಮಾಡಿರುವ ಬಗ್ಗೆ ಪಹಣಿಯಲ್ಲಿ ನಮೂದು ಇತ್ತು ಎಂದರೆ ಸರಿ. ಸದರಿ ಸಾಲ ತೀರಿಸುವ ಸಲುವಾಗಿ 2007 ರಲ್ಲಿ 1 ಎಕ್ರೆ 15 ಗುಂಟೆ ಸ.ನಂ.53 ರ ಆಸ್ತಿಯನ್ನು 6 ನೇ ಪ್ರತಿವಾದಿಗೆ ದಯಾನಂದ ಮತ್ತು ರಘುನಾಥ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಏನು ಮಾಡಿರುತ್ತಾರೆ ಗೊತ್ತಿಲ್ಲ ಆದರೆ ಮಾರಾಟ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. 2007 ರಲ್ಲಿ ದಯಾನಂದ ಮತ್ತು ರಘುನಾಥ ಇವರು 1 ಎಕ್ರೆ 15 ಗುಂಟೆ ಸ.ನಂ.53 ರ ಆಸ್ತಿಯನ್ನು ಮಾರಾಟ ಮಾಡುವುದಾಗಿ ಪ್ರಚಾರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ಸ.ನಂ.53 ರಲ್ಲಿ ಹಿಂದೆ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರು ಎಂದರೆ ಸರಿ. ಸದರಿ ಭತ್ತದ ಬೆಳೆ ಲಾಭದಾಯಕರ ಬೆಳೆ ಇರುವುದಿಲ್ಲ ಎಂದರೆ ಸರಿ. 2007 ರಲ್ಲಿ ಸಾಲ ತೀರಿಸಲು ಆಗುವುದಿಲ್ಲ ಎಂದು ಹಾಗೂ ಲಾಭದಾಯಕ ಬೆಳೆ ಬರುವುದಿಲ್ಲ ಎಂದು

ರಘುನಾಥ ಮತ್ತು ದಯಾನಂದ್ ಇವರು ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯಪತ್ರದಲ್ಲಿ ಹೆಚ್ಚಿನ ಬೆಲೆ 83000/- ಕ್ಕೆ 6 ನೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಯಿಂದ ಖರೀದಿ ಮಾಡಿದ ಬಗ್ಗೆ ನಮೂದು ಇರುತ್ತದೆ ಎಂದೆರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯಪತ್ರ ಮಾಡಿಕೊಡುವ ಕಾಲಕ್ಕೆ ಸದರಿ ಆಸ್ತಿಗೆ ನಾವೇ ಹಕ್ಕುದಾರರು ಮತ್ತು ಮಾಲೀಕರು ಇದ್ದು ಬೇರೆಯಾರಿಗೂ ಹಕ್ಕು ಇರುವುದಿಲ್ಲ ಎಂದು ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ಕಾಂತಪೂಜಾರಿ ತೀರಿಕೊಂಡ ನಂತರ ಸ.ನಂ.53 ರ ಆಸ್ತಿಯಲ್ಲಿ ಶೇಖರ್ ಪೂಜಾರಿ, ದಯಾನಂದ ಮತ್ತು ರಘುನಾಥ್ ಇವರು ಸಾಗುವಳಿ ಮಾಡುತ್ತಾ ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಶೇಖರ್ ಪೂಜಾರಿ ತೀರಿಕೊಂಡ ನಂತರ ದಯಾನಂದ ಮತ್ತು ರಘುನಾಥ್ ಇವರು ಸಾಗುವಳಿ ಮಾಡುತ್ತಾ ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. 2007 ರಲ್ಲಿ ಸದರಿ ಆಸ್ತಿ ದಯಾನಂದ ಮತ್ತು ರಘುನಾಥ್ ಇವರ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಮತ್ತು ಸ್ವಾಧೀನ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಯಾನಂದ ಮತ್ತು ರಘುನಾಥ್ ಇವರು ಸದರಿ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಂತರ 6 ನೇ ಪ್ರತಿವಾದಿ ಹೆಸರಿಗೆ ಸದರಿ ಆಸ್ತಿ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

5. 6 ನೇ ಪ್ರತಿವಾದಿ ತಾವು ಖರೀದಿಸಿದ ಆಸ್ತಿಯನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿ ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆಗಿರುತ್ತದೆ ಎಂದರೆ ಸರಿ. ಭೂ ಪರಿವರ್ತನೆ ಆದ ನಂತರ ಸದರಿ ಆಸ್ತಿಯನ್ನು 6 ನೇ ಪ್ರತಿವಾದಿಯಿಂದ 7 ನೇ ಪ್ರತಿವಾದಿಯವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಜಯಪುರದ ಕೂಳೂರು ಗ್ರಾಮದ ಹತ್ತಿರ ಸತ್ಯಸಾಯಿ ಸರಸ್ವತಿ ವಿದ್ಯಾಸಂಸ್ಥೆ ಇರುತ್ತದೆ ಎಂದರೆ ಸರಿ. ಸದರಿ ಸತ್ಯಸಾಯಿ ಸರಸ್ವತಿ ವಿದ್ಯಾಸಂಸ್ಥೆ ಬಡಮಕ್ಕಳಿಗೆ ಉಚಿತವಾಗಿ ಶಿಕ್ಷಣ ಕೊಡಬೇನ್ನುವ ಉದ್ದೇಶದಿಂದ ಸ್ಥಾಪನೆಯಾದ ಸಂಸ್ಥೆ ಎಂದರೆ ಸರಿ. ಸದರಿ ಸತ್ಯಸಾಯಿ ಸರಸ್ವತಿ ವಿದ್ಯಾಸಂಸ್ಥೆ ಕಟ್ಟಡ ದಾವಾ ಆಸ್ತಿಯ ಪಕ್ಕದಲ್ಲಿ ಬರುತ್ತದೆ ಎಂದರೆ ನನಗೆ

ಗೊತ್ತಿರುವುದಿಲ್ಲ. ಸ.ನಂ.53 ರಲ್ಲಿ 1 ಎಕ್ರೆ 15 ಗುಂಟೆಯಲ್ಲಿ ಸತ್ಯಸಾಯಿ ಸರಸ್ವತಿ ವಿದ್ಯಾಸಂಸ್ಥೆಯವರು ಎರಡು ಗೆಸ್ಟ್ ಹೌಸ್ ಮತ್ತು ರಸ್ತೆಯನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಈ ರೀತಿ ಕಟ್ಟಡ ಮತ್ತು ರಸ್ತೆ ನಿರ್ಮಾಣ ಮಾಡಲು ಸುಮಾರು 80 ಲಕ್ಷ ಖರ್ಚು ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

6. 7 ನೇ ಪ್ರತಿವಾದಿ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ವಾದಿಯರು ತಕರಾರು ಹಾಕಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಆ ವಿಚಾರ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ವಾದಿಯರಿಗೆ ಸದರಿ ವಿಚಾರ ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಂತ ಪೂಜಾರಿ ತೀರಿಕೊಂಡ ನಂತರ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡುವಂತೆ ವಾದಿಯರು ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. ಶೇಖರ್ ಪೂಜಾರಿ, ದಯಾನಂದ ಮತ್ತು ರಘುನಾಥ ಹೆಸರಿಗೆ ಖಾತೆ ಬದಲಾವಣೆ ಆಗಿರುವುದು ಸರಿಯಿಲ್ಲ ಎಂದು ವಾದಿಯರು ತಾಲ್ಲೂಕು ಕಚೇರಿಗೆ ಆಗಲೀ, ಕಂದಾಯ ಅಧಿಕಾರಿಗಳಿಗೆ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ ಎಂದರೆ ಸರಿ. ನಿಪಿ-7 ರ 3 ನೇ ಪುಟದಲ್ಲಿ ಸ.ನಂ.48/1 ಮತ್ತು 48/2 ರಲ್ಲಿ ಒಟ್ಟು 2 ಎಕ್ರೆ 30 ಗುಂಟೆ ಕಾಂತಪೂಜಾರಿ ಇವರಿಗೆ ಭೂಸುಧಾರಣೆಯಲ್ಲಿ ಮಂಜೂರಾದ ಜಮೀನು ಇರುತ್ತದೆ ಎಂದರೆ ಸರಿ. ಸದರಿ 2 ಎಕ್ರೆ 30 ಗುಂಟೆ ಪೈಕಿ 20 ಗುಂಟೆಯನ್ನು ಕಾಂತಪೂಜಾರಿಯವರ ಮಕ್ಕಳಾದ ಶೇಖರ್ ಪೂಜಾರಿ ಮತ್ತು ರಘುನಾಥ ಇವರು ಚಂದ್ರಶೇಖರ್ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ 20 ಗುಂಟೆ ಜಾಗ ಚಂದ್ರಶೇಖರ್ ತೀರಿಕೊಂಡ ನಂತರ ಅವರ ಸೊಸೆಯ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

7. ಸ.ನಂ.48 ರಲ್ಲಿ 2 ಎಕ್ರೆ 30 ಗುಂಟೆಗೆ ದಾವೆ ಹೂಡಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಪಹಣಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ಕಾಂತಪೂಜಾರಿಯವರ ಮಕ್ಕಳಾದ ಶೇಖರ್ ಪೂಜಾರಿ ಮತ್ತು ರಘುನಾಥ ಮತ್ತು ದಯಾನಂದ್ ಮಾರಾಟ ಮಾಡಿದ ಕೆಲವು ಆಸ್ತಿಗಳನ್ನು ಬಿಟ್ಟು ಕೆಲವು ಆಸ್ತಿಗಳ ಸಂಬಂಧ ದಾವೆ ಹೂಡಿರುತ್ತೇನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾವು ಈ ದಾವೆಯಲ್ಲಿ ಆಸ್ತಿಗಳನ್ನು

ಖರೀದಿ ಮಾಡಿದ ಎಲ್ಲಾ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಮತ್ತು ಆಸ್ತಿಗಳನ್ನು ಮಾತ್ರ ತೋರಿಸಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸತ್ಯಸಾಯಿ ಶಾಲೆಯವರು ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿಲ್ಲ ಎಂದರೆ ಸರಿ. ಸ.ನಂ.53 ರಲ್ಲಿ 1 ಎಕ್ರೆ 15 ಗುಂಟೆ ಆಸ್ತಿಯನ್ನು 6 ನೇ ಪ್ರತಿವಾದಿ ಸದ್ ಭಾವನೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ರಘುನಾಥ ಮತ್ತು ದಯಾನಂದ್ ನಾವೇ ಮಾಲೀಕರು ಇದ್ದು ಬೇರೆ ಯಾರು ಇರುವುದಿಲ್ಲ ಎಂದು ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2007 ರಿಂದ ರಘುನಾಥ ಮತ್ತು ದಯಾನಂದ್ ಇವರು ಸ್ವಾ ಧೀನದಲ್ಲಿ ಇದ್ದುದ್ದರಿಂದ 6 ನೇ ಪ್ರತಿವಾದಿಯವರು ಸದರಿಯವರೇ ಆಸ್ತಿಯ ಮಾಲೀಕರು ಎಂದು ತಾವು ಸದ್ ಭಾವನೆಯಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ರಘುನಾಥ ಮತ್ತು ದಯಾನಂದ್ ಇವರು ಮಾರಟ ಮಾಡಿ ಬಂದ ಪ್ರತಿಫಲದ ಮೊತ್ತವನ್ನು ಸಾಲದ ತೀರುವಳಿಗಾಗಿ ಬಳಸಿಕೊಂಡ ಕಾರಣ ಅದು ನಮ್ಮ ಮೇಲೆಯೂ ಸಹ ಬಂಧನಕಾರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

8. ನನ್ನ ತಾಯಿ ಮತ್ತು ಚಿಕ್ಕಮ್ಮ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯ ಹೊರಬರುತ್ತದೆ ಎಂದು ನಾನು ಅವರ ಪರವಾಗಿ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಕಾಂತಪೂಜಾರಿಯವರಿಗೆ ವಾಸದ ಮನೆ ಇರುತ್ತದೆ. ಸದರಿ ಮನೆಯಲ್ಲಿ ಭಾಗ ಬೇಕು ಎಂದು ನಾವು ಕೇಳಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಪ್ರತಿವಾದಿ **9** ರಿಂದ **11** ರವರ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯ ನಿರಾಕರಿಸಲಾಯಿತು**.** ಕಾರಣ ಸದರಿಯವರು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.**

ಮರು ವಿಚಾರಣೆಃ ಇಲ್ಲಃಃ

ಅಸಲು ದಾವಾ ನಂಃ 2/2024
ಪಿ ಡಬ್ಲ್ಯುಃ1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ